# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 425 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19-02-2024 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಮನಗರ ಜಿಲ್ಲೆಯಲ್ಲಿ ಕಂಡು ಬಂದಿರುವ ಕಾಡಾನೆಗಳ ದಾಳಿ ಪ್ರಕರಣಗಳು ಎಷ್ಟು; ಈ ಪ್ರಕರಣಗಳಲ್ಲಿ ಉಂಟಾಗಿರುವ ಜೀವಹಾನಿ ಸಂಖ್ಯೆ ಎಷ್ಟು; ಕಾಡಾನೆಗಳ ದಾಳಿಯಿಂದ ನಷ್ಟವಾಗಿರುವ ಮನೆ ಗೋಡೆಗಳು, ಜಮೀನಿನಲ್ಲಿರುವ ಶೆಡ್ ಗಳು, ಜಮೀನಿಗೆ ಅಳವಡಿಸಿರುವ ಪಂಪ್ ಸೆಟ್ಟು, ಪೈಪುಗಳು,, ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳ ನಾಶದ ಪ್ರಮಾಣವೆಷ್ಟು; ಇವುಗಳ ಮೌಲ್ಯವೆಷ್ಟು; ನಷ್ಟ ಹೊಂದಿರುವ ರೈತರಿಗೆ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳ ದಾಳಿಯಿಂದ ಉಂಟಾದ ಹಾನಿ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.<br><br>• 07 ಪ್ರಕರಣಗಳಲ್ಲಿ ಜೀವಹಾನಿ ಉಂಟಾಗಿರುತ್ತದೆ.<br>• ಕಾಡಾನೆಗಳ ದಾಳಿಯಿಂದ ಮನೆ ಗೋಡೆಗಳು, ಜಮೀನಿನಲ್ಲಿರುವ ಶೆಡ್‌ಗಳು, ಜಮೀನಿಗೆ ಅಳವಡಿಸಿರುವ ಪಂಪ್‌ಸೆಟ್ಟು, ಪೈಪುಗಳು, ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರ ಬೆಳೆಗಳು ನಾಶವಾಗಿರುತ್ತದೆ.<br><br>ಮಾನವ-ಪ್ರಾಣ ಹಾನಿ, ಮಾನವ ಗಾಯ, ಬೆಳೆನಾಶ, ಆಸ್ತಿ ನಷ್ಟ ಮತ್ತು ಸಾಕು ಪ್ರಾಣಿ ಹಾನಿ ಪ್ರಕರಣಗಳ ಸಂಖ್ಯೆ ಮತ್ತು ಪಾವತಿಸಲಾದ ಪರಿಹಾರ ಮೊತ್ತದ ವಿವರವನ್ನು **ಅನುಬಂಧ -1 ರಲ್ಲಿ ನೀಡಲಾಗಿದೆ.** |
| ಆ) | ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳನ್ನು ಸೆರೆಹಿಡಿಯಲು ಎಷ್ಟು ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ; ಪ್ರತಿ ಕಾರ್ಯಾಚರಣೆಗೆ ತೆಗೆದುಕೊಂಡ ಅವಧಿ ಎಷ್ಟು; ಪ್ರತಿ ಕಾರ್ಯಾಚರಣೆಗೆ ತಗುಲಿದ ವೆಚ್ಚವೆಷ್ಟು; ಈ ಕಾರ್ಯಾಚರಣೆಗಳಲ್ಲಿ ಸೆರೆ ಹಿಡಿಯಲಾದ ಕಾಡಾನೆಗಳ ಸಂಖ್ಯೆ ಎಷ್ಟು; (ಕಾರ್ಯಾಚರಣೆ ವಿವರ ನೀಡುವುದು) | • ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ರಾಮನಗರ ಜಿಲ್ಲೆಯಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯಲು (ಎರಡು) ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ.<br>• 2022-23ನೇ ಸಾಲಿನಲ್ಲಿ ದಿನಾಂಕ:11.08.2022 ರಿಂದ 26.08.2022 ರವರೆಗೆ 16 ದಿನಗಳು ಮತ್ತು 2023-24ನೇ ಸಾಲಿನಲ್ಲಿ 03.06.2023 ರಿಂದ 15.06.2023 13 ದಿನಗಳು.<br>• 2022-23ನೇ ಸಾಲಿನಲ್ಲಿ ದಿನಾಂಕ: 11.08.2022 ರಿಂದ 26.08.2022 ರವರೆಗೆ ನಡೆದ ಕಾರ್ಯಾಚರಣೆಗೆ ರೂ.23.524 ಲಕ್ಷಗಳ ವೆಚ್ಚವಾಗಿರುತ್ತದೆ ಮತ್ತು 2023-24ನೇ ಸಾಲಿನ ಕಾರ್ಯಾಚರಣೆಗೆ ರೂ. 27.00 ಲಕ್ಷಗಳಾಗಿದ್ದು, ವೆಚ್ಚ ಭರಿಸುವುದು ಬಾಕಿ ಇರುತ್ತದೆ.<br><br>ಎರಡು ಕಾರ್ಯಾಚರಣೆಯಲ್ಲಿ ತಲಾ ಎರಡರಂತೆ ಒಟ್ಟು 04 ಕಾಡಾನೆಗಳನ್ನು ಸೆರೆ ಹಿಡಿಯಲಾಗಿದೆ. |
| ಇ) | ಈ ಭಾಗದಲ್ಲಿ ಕಾಡಾನೆಗಳ ನಿಯಂತ್ರಣಕ್ಕೆ ಅನೇಕ ಬಾರಿ ಮನವಿಮಾಡಿದ್ದರೂ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದು, ಪ್ರಾಣಹಾಣಿ, ಕೃಷಿ ಉಪಕರಣಗಳು ಮತ್ತು ಬೆಳೆದ ಬೆಳೆಗಳನ್ನು ಕಳೆದುಕೊಂಡು ಸರ್ಕಾರ ಕೊಡುವ ಪರಿಹಾರಕ್ಕಾಗಿ ವರ್ಷಗಟ್ಟಲೇ ಕಾಯಬೇಕಾದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ | ರಾಮನಗರ ಜಿಲ್ಲೆಯಲ್ಲಿ ಕಾಡಾನೆ ಹಾವಳಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಎಲ್ಲಾ ಮನವಿಗಳಿಗೆ ಯಾವುದೇ ನಿರ್ಲಕ್ಷ್ಯತೆ ಇಲ್ಲದೆ ಕೂಡಲೇ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ. ಅಲ್ಲದೇ, ರಾಮನಗರ ಜಿಲ್ಲಾ ಆನೆ ಕಾರ್ಯಪಡೆಗೆ ಆನೆಗಳ ಇರುವಿಕೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ಸ್ವೀಕೃತವಾಗುವ ದೂರುಗಳನ್ನು ಸಹ ಅಧಿಕಾರಿ ಸಿಬ್ಬಂದಿಗಳ ಮೂಲಕ ತಕ್ಷಣವೇ ಸ್ಪಂದಿಸಿ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಬಂದಿದೆಯೇ: ಬಂದಿದಲ್ಲಿ ಆನೆಗಳ ಹಾವಳಿಗೆ ಶಾಶ್ವತ ಕಡಿವಾಣ ಹಾಕಲು ರೈಲ್ವೆ ಬ್ಯಾರಿಕೇಡ್ ತಡೆಗೋಡೆ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | 1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕ:30-06-2023 ರಾಮನಗರ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ತಡೆಗಟ್ಟಲು ಜಿಲ್ಲಾ ಆನೆ ಕಾರ್ಯಪಡೆಯನ್ನು ರಚಿಸಲಾಗಿರುತ್ತದೆ. ಸದರಿ ಆನೆ ಕಾರ್ಯಪಡೆಯಲ್ಲಿ ವಲಯ ಅರಣ್ಯಾಧಿಕಾರಿಗಳು, ಉಪ ವಲಯ ಅರಣ್ಯಾಧಿಕಾರಿಗಳು, ಗಸ್ತು ಅರಣ್ಯ ಪಾಲಕರು ಹಾಗೂ 24 ಸಂಖ್ಯೆ ಹೊರಗುತ್ತಿಗೆ ಸಿಬ್ಬಂದಿಗಳು ದಿನದ 24 ಗಂಟೆಗಳ ಕಾಲ ಅರಣ್ಯ ಪ್ರದೇಶದ ಗಡಿಗಳಲ್ಲಿ ಕಾಡಾನೆಗಳು ಕಾಡಿನಿಂದ ನಾಡಿಗೆ ಬಾರದಂತೆ ಹಿಮ್ಮೆಟ್ಟಿಸಲು ಶ್ರಮಿಸುತ್ತಿದ್ದಾರೆ. ಪ್ರತಿ ದಿನ ಬೆಳಿಗ್ಗೆ ಆನೆ ಕಾರ್ಯಪಡೆ ವತಿಯಿಂದ ಗ್ರಾಮಗಳಿಗೆ ತೆರಳಿ ಗ್ರಾಮಸ್ಥರಿಗೆ ಧ್ವನಿವರ್ಧಕ ಮೂಲಕ ಮಾಹಿತಿ ನೀಡಲಾಗುತ್ತಿದೆ. ಸಾರ್ವಜನಿಕರಿಂದ ಆನೆಗಳ ಇರುವಿಕೆ ಬಗ್ಗೆ ಆನೆ ಕಾರ್ಯಪಡೆ Control Room ಗೆ ಸ್ವೀಕೃತವಾಗುವ ದೂರುಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿಗಳು ತೆರಳಿ ಆನೆಗಳನ್ನು ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆನೆ ಕಾರ್ಯಪಡೆ Control Room ನ ಮೂಲಕ ಕಾಡಂಚಿನ ಗ್ರಾಮಗಳ ಗ್ರಾಮಸ್ಥರ ಮೊಬೈಲ್ ದೂರವಾಣಿ ಸಂಖ್ಯೆಯನ್ನು ನೋಂದಣಿ ಮಾಡಿ ಎಸ್.ಎಂ.ಎಸ್ ಮೂಲಕ ಕಾಡಾನೆಗಳ ಚಲನವಲನಗಳ ಮಾಹಿತಿಯನ್ನು ನೀಡುವ ಮೂಲಕ ಅರಿವು ಮೂಡಿಸಲಾಗುತ್ತಿದೆ.<br>2. ರಾಮನಗರ ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ ಕಾಡಾನೆಗಳ ದಾಳಿಯಿಂದ ಒಟ್ಟು 3116 ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ ದಯಾತ್ಮಕ ಧನ ರೂ. 1,49,86,251/- ಗಳನ್ನು, 2022-23ನೇ ಸಾಲಿನಲ್ಲಿ ದಾಖಲಾದ 4335 ಪ್ರಕರಣಗಳಿಗೆ ದಯಾತ್ಮಕ ಧನ ರೂ. 2,71,81,930/- ಗಳನ್ನು, 2022-23ನೇ ಸಾಲಿನಲ್ಲಿ ದಾಖಲಾದ 6364 ಪ್ರಕರಣಗಳಿಗೆ ಧಯಾತ್ಮಕ ಧನ ರೂ. 4,06.71,709/- ಗಳನ್ನು ಮತ್ತು 2023-24ನೇ ಸಾಲಿನ ಸೆಪ್ಟೆಂಬರ್-23ರ ಮಾಹೆಯವರೆಗೆ ದಾಖಲಾದ 2476 ಪ್ರಕರಣಗಳಿಗೆ ರೂ 2,51,93,382/-ಗಳ ದಯಾತ್ಮಕ ಧನವನ್ನು ಪಾವತಿಸಲಾಗಿದೆ. ಉಳಿದಂತೆ ಅಕ್ಟೋಬರ್-2023 ರಿಂದ ಇಲ್ಲಿಯವರೆಗಿನ ಪ್ರಕರಣಗಳಿಗೆ ಅನುದಾನ ಸ್ವೀಕೃತವಾದ ಕೂಡಲೇ ದಯಾತ್ಮಕ ಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ದಯಾತ್ಮಕ ಧನವನ್ನು ಶೀಘ್ರವಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ ವರ್ಷಗಟ್ಟಲೆ ಕಾಯುವ ಸಂದರ್ಭ ಇರುವುದಿಲ್ಲ.<br>ಆನೆಗಳ ಹಾವಳಿಯನ್ನು ಶಾಶ್ವತವಾಗಿ ನಿಯಂತ್ರಿಸಲು ರಾಮನಗರ ಪ್ರಾದೇಶಿಕ ವಿಭಾಗದಲ್ಲಿ 2019-20ನೇ ಸಾಲಿನಲ್ಲಿ 4.25 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿರುತ್ತದೆ ಹಾಗೂ ಪ್ರಸ್ತುತ ವರ್ಷದಲ್ಲಿ ರಾಮನಗರ ಪ್ರಾದೇಶಿಕ ವಿಭಾಗದಲ್ಲಿ 4 ಕಿ.ಮೀ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗದಲ್ಲಿ 18.70 ಕಿ.ಮೀ. ಮತ್ತು ಕಾವೇರಿ ವನ್ಯಜೀವಿ ವಿಭಾಗದಲ್ಲಿ 17.00 ಕಿ.ಮೀ. ರೈಲ್ವೇ ಬ್ಯಾರಿಕೇಡ್ ಹೀಗೆ ಒಟ್ಟು 39.7 ಕಿ.ಮೀ. ರೈಲ್ವೇ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಅಪಜೀ 28 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## ಅನುಬಂಧ-1

| ಕ್ರ. ಸಂ | ವರ್ಷ | ಜಿಲ್ಲೆ | ಮಾನವ ಪ್ರಾಣ ಹಾನಿ | | ಮಾನವ ಗಾಯ | | ಬೆಳೆನಾಶ | | ಆಸ್ತಿನಷ್ಟ | | ಸಾಕುಪ್ರಾಣಿ ಹಾನಿ | | ಒಟ್ಟು | |
|---|---|---|---|---|---|---|---|---|---|---|---|---|---|---|
| | | | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ | ಪ್ರಕರಣ ಸಂಖ್ಯೆ | ಪರಿಹಾರ ಮೊತ್ತ |
| **1** | **2020-21** | ರಾಮನಗರ | 0 | - | 1 | 2,50,000 | 2825 | 1,32,69,504 | 279 | 13,81,747 | 11 | 85,000 | **3,116** | **1,49,86,251** |
| **2** | **2021-22** | | 2 | 15,00,000 | 3 | 77,500 | 3753 | 2,19,40,501 | 562 | 35,48,929 | 15 | 1,15,000 | **4,335** | **2,71,81,930** |
| **3** | **2022-23** | | 1 | 7,50,000 | 4 | 1,00,267 | 5673 | 3,62,75,618 | 651 | 32,25,824 | 35 | 3,20,000 | **6,364** | **4,06,71,709** |
| **4** | **2023-24** | | 4 | 60,00,000 | 7 | 3,80,000 | 2139 | 1,68,83,146 | 310 | 19,20,036 | 16 | 10,200 | **2,476** | **2,51,93,382** |
| **ಒಟ್ಟು** | | | **7** | **82,50,000** | **15** | **8,07,767** | **14390** | **8,83,68,769** | **1802** | **1,00,76,536** | **77** | **5,30,200** | **16,291** | **10,80,33,272** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.